# ನವಿಲುಗನ್ನಡಿ

ವೈವಿಧ್ಯಮಯ ಬರಹಗಳಿಂದ ಕೂಡಿದ ಆಗಸ್ಟ್ ಸಂಚಿಕೆ ಆಕರ್ಷಕ. ಕುಸುಮಾಕರ ದೇವರಗೆಣ್ಣೂರ ಅವರ ಲೇಖನ 'ವಿರಾಟ್ ವ್ಯಕ್ತಿತ್ವದ ಬೇಂದ್ರೆ', ಗುರುಪ್ರಸಾದ್ ಕಾಗಿನೆಲೆ ಅವರ ಸಂದರ್ಶನ, 'ಸ್ಮೃತಿಬಿಂಬ' ಚಿತ್ರ–ಅಂಕಣ ಗಮನ ಸೆಳೆದವು.

**ಎನ್. ಮಹದೇವ, ಚೆನ್ನೈ**

'ವಿರಾಟ್ ವ್ಯಕ್ತಿತ್ವದ ಬೇಂದ್ರೆ' ಬೇಂದ್ರೆ ಬಗೆಗಿನ ಗೌರವವನ್ನು ಇಮ್ಮಡಿಗೊಳಿಸಿತು. 'ನನ್ನ ಕಥಾಪ್ರಸಂಗ'ದಲ್ಲಿ ವೈದೇಹಿ ಅವರ ಬಾಲ್ಯದ ನೆನಪುಗಳು ಪ್ರಕಟಗೊಂಡಿವೆ.

**ಶ್ರೀನಿವಾಸ ಹುದ್ದಾರ, ಹುಬ್ಬಳ್ಳಿ**

ಕುಸುಮಾಕರ ದೇವರಗೆಣ್ಣೂರ ಅವರ ಬೇಂದ್ರೆ ನೆನಪುಗಳನ್ನು ಓದಿ ಬೇಂದ್ರೆ ಜೊತೆಗಿನ ನನ್ನ ನೆನಪುಗಳೂ ಮರುಕಳಿಸಿದವು. ಗುರುಪ್ರಸಾದ್ ಕಾಗಿನೆಲೆ ಅವರ ಸಂದರ್ಶನ ಅಮೆರಿಕನ್ನಡಿಗರ ನೈಜ ಪರಿಸ್ಥಿತಿಯನ್ನು ಮನಗಾಣಿಸಿತು.

**ಗುರುಮೂರ್ತಿ ಪೆಂಡಕೂರು, ಬೆಂಗಳೂರು**

ಬಾಲಕೃಷ್ಣ ಶಿಬಾರ್ಲ ಅವರ 'ಹಾಟ್‌ಮಿಟ್ಲೆ' ಕತೆ ವಿಭಿನ್ನವಾಗಿದೆ.

**ರಾಜು ಹಗ್ಗದ, ಮುದ್ದೇಬಿಹಾಳ**

ಕತೆ 'ಮತ್ತೆ ಬಾ ಕೇತಕಿ' (ವಸುಮತಿ ಉಡುಪ) ಹಾಗೂ ಅನುಭವ ಕಥನ 'ಅಪಹರಣವೊಂದರ ಹಿಂದೆ' (ತುರುವೇಕೆರೆ ರವಿಶಂಕರ್) ಮೆಚ್ಚುಗೆಯಾದವು.

**ಸುಂದರ್, ಬೆಂಗಳೂರು**

ನಟರಾಜ್ ಹುಳಿಯಾರ್ ಹಾಗೂ ಆರಿಫ್ ರಾಜಾ ಅವರ ಗೆಳೆಯನ ಕುರಿತ ಕವನಗಳು ಅರ್ಥಪೂರ್ಣವಾಗಿವೆ.

**ಕುಸುಮಾ, ಬೆಜ್ಜವಳ್ಳಿ**




'ಕಲ್ಪನೆ ಕಾವ್ಯ' ಬಹಳ ಇಷ್ಟವಾದ ಅಂಕಣ. ಹೊಸ ಕವಿಗಳಿಗೆ ಇದೊಂದು ಅತ್ಯುತ್ತಮ ವೇದಿಕೆ. ಇದಕ್ಕೆ ನೀಡುವ ಚಿತ್ರಗಳು ಒಂದಕ್ಕಿಂತ ಒಂದು ಭಿನ್ನವಾಗಿರುತ್ತವೆ.

**ಕಾಳೀಹುಂಡಿ ಶಿವಕುಮಾರ್, ಮೈಸೂರು**

ಮಲಯಾಳಂ ಸಿನಿಮಾ 'ಅಮ್ಮ ಅರಿಯಾನ್' ವಿಶ್ಲೇಷಣೆ (ಪದ್ಮನಾಭ ಭಟ್) ಚೆನ್ನಾಗಿತ್ತು. ಬರವಣಿಗೆ ಕತೆಯನ್ನು ಕಣ್ಣಿಗೆ ಕಟ್ಟುವಂತೆ ಮಾಡಿದೆ; ಸಿನಿಮಾ ನೋಡುವಂತೆ ಪ್ರಚೋದಿಸಿದೆ.

**ಮೀರಾಕುಮಾರಿ, ಬೆಂಗಳೂರು**

ವಾಸ್ತವ ಚಿತ್ರಣದಿಂದ ಕೂಡಿದ ನೀತಾ ರಾವ್ ಅವರ 'ಕೋನಗಳ ನಡುವೆ' ಕತೆ ಕುತೂಹಲದಿಂದ ಓದಿಸಿಕೊಂಡು ಹೋಯಿತು.

**ಅರವಿಂದ ಬಿರಾದಾರ, ಬೆಂಗಳೂರು**

ತೇಜಶ್ರೀ, ವಾಸುದೇವ ನಾಡಿಗ್ ಹಾಗೂ ಸ್ಮಿತಾ ಅಮೃತರಾಜ್ ಅವರ ಕವನಗಳು ಚೇತೋಹಾರಿಯಾಗಿವೆ.

**ಸಂಗೀತಾ ಕೆ., ತುಮಕೂರು**